5 ರನ್ವಯ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸನ್ನದುಗಳನ್ನು ನೀಡಲಾಗುವುದು.

ಇ) ತುಮಕೂರು ನಗರ ವಿಧಾನ ಸಭಾ ಕ್ಷೇತ್ರದಲ್ಲಿ ಎಂ.ಎಸ್.ಐ.ಎಲ್. ವತಿಯಿಂದ ತುಮಕೂರು ನಗರ ಪ್ರದೇಶದಲ್ಲಿ ಭೀಮಸಂದ್ರ, ಬಿ.ಹೆಚ್.ರಸ್ತೆ ಇಲ್ಲಿ ಒಂದು ಸಿಎಲ್–11ಸಿ ಸನ್ನದು ಕಾರ್ಯನಿರ್ವಹಿಸುತ್ತಿದೆ. ಇನ್ನೂ ಎರಡು ಸಿಎಲ್–11ಸಿ ಸನ್ನದು ನೀಡಲು ಬಾಕಿ ಇದ್ದು ಈ ಪೈಕಿ ತುಮಕೂರು ಪಟ್ಟಣದ ಬಿ.ಹೆಚ್. ರಸ್ತೆಯಲ್ಲಿ ಒಂದು ಸನ್ನದು ಮಂಜೂರಾತಿಗೆ ಪೂರ್ವಾನುಮತಿ ಕೋರಿ ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಈ ಪ್ರಸ್ತಾವನೆಗೆ ಆಕ್ಷೇಪಣೆ ವ್ಯಕ್ತವಾಗಿ ಮಾನ್ಯ ಪ್ರಿನ್ಸಿಪಲ್ ಸಿವಿಲ್ ಜಡ್ಜ್(ಜೂನಿಯರ್ ಡಿವಿಷನ್) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯವು ಬಾಕಿ ಇರುತ್ತದೆ. ಉಳಿದ ಇನ್ನೊಂದು ಸಿಎಲ್–11ಸಿ ಸನ್ನದು ನೀಡಲು ಬಾಕಿ ಇದ್ದು, ಪ್ರಸ್ತಾವನೆ ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಪ್ಲಾಸ್ಟಿಕ್ ನಿಷೇಧ

1180(888); ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) 40 ಮೈಕ್ರಾನ್‌ಗಿಂತ ಕಡಿಮೆ ಪ್ಲಾಸ್ಟಿಕ್ ನಿಷೇಧದ ನಂತರ ರಾಜ್ಯಾದ್ಯಂತ ದಾಳಿ ಮಾಡಿ 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ವಶಪಡಿಸಿಕೊಂಡಿರುವ ಪ್ರಕರಣಗಳೇಷ್ಟು; ಅದರ ಪ್ರಮಾಣ ಎಷ್ಟು;

ಆ) ತಪ್ಪಿತಸ್ಥರಿಗೆ ವಿಧಿಸಿರುವ ದಂಡದ ಪ್ರಮಾಣ ಎಷ್ಟು; ಕಾನೂನಿನಲ್ಲಿದ್ದಂತೆ ತಪ್ಪಿತಸ್ಥರ ಮೇಲೆ ಜರುಗಿಸಬಹುದಾದ ಕ್ರಮಗಳೇನು?

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಅ) 40 ಮೈಕ್ರಾನ್‌ಗಿಂತ ಕಡಿಮೆ ಗುಣಮಟ್ಟದ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳ ಮಾರಾಟ ಮತ್ತು ಬಳಕೆಯನ್ನು ನಿಲ್ಲಿಸುವ ಸಲುವಾಗಿ ನಗರ ಸ್ಥಳೀಯ ಸಂಸ್ಥೆಗಳು ಅಕ್ರಮವಾಗಿ 40 ಮೈಕ್ರಾನ್‌ಗಿಂತ ಕಡಿಮೆ ಗುಣಮಟ್ಟದ ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳ ದಾಸ್ತಾನು ಹೊಂದಿರುವ ಬಗ್ಗೆ ಮಾಹಿತಿ ದೊರೆತ ಕೂಡಲೇ ಸದರಿ ದಾಸ್ತಾನುಗಳ ಮೇಲೆ ದಾಳಿ ನಡೆಸಿರುವ ಬಗ್ಗೆ ಪ್ರಕರಣಗಳು ನಗರ ಸ್ಥಳೀಯ ಸಂಸ್ಥೆಗಳಲ್ಲಿ ವರದಿಯಾಗಿರುತ್ತವೆ. ಇದುವರೆಗೂ 2177 ದಾಳಿ ಹಾಗು ಮುಟ್ಟುಗೋಲು ಪ್ರಕರಣಗಳ ಬಗ್ಗೆ ವರದಿಯಾಗಿರುತ್ತವೆ. ಇದುವರೆಗೂ ಅಂದಾಜು 78 ಟನ್‌ಗಳಷ್ಟು ಅಕ್ರಮ ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ.

ಆ) ಇದುವರೆಗೂ 2177 ದಾಳಿ ಪ್ರಕರಣಗಳಲ್ಲಿ, ಅಕ್ರಮ ಕ್ಯಾರಿಬ್ಯಾಗ್‌ಗಳನ್ನು ವಶಪಡಿಸಿಕೊಂಡು ರೂ. 8,02,275 ಮೊತ್ತದ ಜುಲ್ಮಾನೆಯನ್ನು ರಾಜ್ಯವ್ಯಾಪಿ ಸಂಗ್ರಹಿಸಲಾಗಿರುತ್ತದೆ. ಇದನ್ನು ಹೊರತುಪಡಿಸಿದರೆ ತಪ್ಪಿತಸ್ಥರ ವಿರುದ್ಧ ENVIRONMENT (PROTECTION) ACT, 1986ರ ಸೆಕ್ಷನ್–5 ಹಾಗು 16ರ ರಂತೆ ಕಾನೂನಿನ ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ.

ಅತ್ಯಾಚಾರ, ಕಳ್ಳತನ, ವಂಚನೆಗಳ ಪ್ರಕರಣಗಳು

1182(2029); ಡಾ॥ ಶಿವರಾಜ್ ಪಾಟೀಲ್ ಎಸ್. (ರಾಯಚೂರು ನಗರ)

ಅ) ರಾಯಚೂರು ಜಿಲ್ಲೆಯಲ್ಲಿ ಅತ್ಯಾಚಾರ, ಕಳ್ಳತನ ಹಾಗೂ ವಂಚನೆ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದ್ದು, ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

ಆ) ಈವರೆವಿಗೂ ದಾಖಲುಗೊಂಡ ಪ್ರಕರಣಗಳ ಸಂಖ್ಯೆ ಎಷ್ಟು; ಈವರೆವಿಗೂ ಎಷ್ಟು ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ; ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; (ಪೊಲೀಸ್ ಠಾಣೆವಾರು ಸಂಪೂರ್ಣ ವಿವರ ನೀಡುವುದು)?